# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 758(724)

ಮಾನ್ಯ ಸದಸ್ಯರ ಹೆಸರು: ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ: 16.12.2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2016ರ ಪೂರ್ವದಲ್ಲಿ 6 ರಿಂದ 7 ಮತ್ತು 8ನೇ ತರಗತಿಗೆ ನೇಮಕವಾಗಿದ್ದ ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಹಿಂದಿ (ಪಿ.ಎಸ್.ಟಿ) 1 ರಿಂದ 5ನೇ ತರಗತಿ ಶಿಕ್ಷಕರೆಂದು ಪದನಾಮೀಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br>• 2016ರ ಪೂರ್ವದಲ್ಲಿ ಆ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ ಶಿಕ್ಷಕಿಯರನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಯಾವುದೇ ಶಿಕ್ಷಕರನ್ನು ಕೇವಲ 6 ರಿಂದ 7/8ನೇ ತರಗತಿಗೆ ಮಾತ್ರ ಪಾಠ ಬೋಧನೆ ಮಾಡಲು ನೇಮಕಾತಿ ಮಾಡಿಕೊಂಡಿರುವುದಿಲ್ಲ.<br><br>• ಎನ್.ಸಿ.ಟಿ.ಇ. ನಿಯಮಗಳ ಅನುಸಾರ 2017ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಎರಡು ವೃಂದಗಳನ್ನು ರಚಿಸಲಾಗಿರುತ್ತದೆ.<br><br>1. ಪ್ರಾಥಮಿಕ ಶಾಲಾ ಶಿಕ್ಷಕರು(ಪಿ.ಎಸ್.ಟಿ) (1ರಿಂದ 5ನೇ ತರಗತಿ)<br>2. ಪದವೀಧರ ಪ್ರಾಥಮಿಕ ಶಿಕ್ಷಕರು(ಜಿ.ಪಿ.ಟಿ) (6 ರಿಂದ 8ನೇ ತರಗತಿ)<br><br>2017ಕ್ಕಿಂತ ಪೂರ್ವದಲ್ಲಿ ಜಾರಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಪಿಯುಸಿ ಮತ್ತು |

| | | |
|---|---|---|
| | | ಟಿಸಿಹೆಚ್/ಡಿಇಡಿ ವಿದ್ಯಾರ್ಹತೆ ಆಧಾರದ ಮೇಲೆ ನೇಮಕಗೊಂಡಿರುವ ಎಲ್ಲ ಶಿಕ್ಷಕರನ್ನು ಅವರಿಗೆ ಯಾವುದೇ ತೊಂದರೆಯಾಗದಂತೆ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರು (ಪಿಎಸ್‌ಟಿ) (1 ರಿಂದ 5 ನೇ ತರಗತಿ) ವೃಂದದಲ್ಲಿರಿಸ- ಲಾಗಿರುತ್ತದೆ. ಸದರಿ ಕ್ರಮವನ್ನು ಎನ್.ಸಿ.ಟಿ.ಇ. ನಿಯಮಗಳನುಸಾರ ಮಾಡಲಾಗಿರುತ್ತದೆ. |
| ಆ) | ಪಿ.ಯು.ಸಿ. ಟಿ.ಸಿಹೆಚ್/ಡಿ.ಎಡ್ ವಿದ್ಯಾರ್ಹತೆಯ ಮೇಲೆ ನೇಮಕವಾಗಿರುವ ಪ್ರಾಥಮಿಕ ಶಾಲಾ ಹಿಂದಿ (ಪಿ.ಎಸ್.ಟಿ ಹಿಂದಿ) (1 ರಿಂದ 5ನೇ ತರಗತಿ) ಶಿಕ್ಷಕರನ್ನು 6-8ನೇ ತರಗತಿಗಳಿಗೆ ಬೋಧನೆ ಮಾಡಲು ಸೂಚಿಸಿರುವುದು ಶಿಕ್ಷಣ ಹಕ್ಕು ಕಾಯಿದೆ-2009 ಮತ್ತು ಎನ್.ಸಿ.ಟಿ ಇ ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆಯಾಗಿಲ್ಲವೇ: | 1. 2017 ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿದ ನಂತರ ಪಿಯುಸಿ ಮತ್ತು ಟಿ.ಸಿ.ಹೆಚ್/ಡಿ.ಇಡಿ. ವಿದ್ಯಾರ್ಹತೆ ಆಧಾರದ ಮೇಲೆ ಈ ಹಿಂದೆ ನೇಮಕವಾಗಿರುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 626 ಪಿಬಿಎಸ್ 2014, ದಿನಾಂಕ 19.05.2017ರ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5 ನೇ ತರಗತಿ) ಎಂದು ಪದನಾಮೀಕರಿಸಲಾಗಿರುತ್ತದೆ.<br><br>2. ಆರ್.ಟಿ.ಇ ಕಾಯ್ದೆ ಹಾಗೂ ಎನ್.ಸಿ.ಟಿ.ಇ. ನಿಯಮಗಳ ಅನುಸಾರ 2017 ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಜಿ.ಪಿ.ಟಿ) (6 ರಿಂದ 8 ನೇ ತರಗತಿ) ಹುದ್ದೆಯ ನೇಮಕಾತಿಗೆ ಪದವಿ ಮತ್ತು ಟಿ.ಸಿ.ಹೆಚ್/ಡಿ.ಇಡಿ. ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ ಸದರಿ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.<br><br>3. ಮುಂದುವರೆದು, ಈ ಹಿಂದೆ ಪಿಯುಸಿ ಮತ್ತು ಟಿ.ಸಿ.ಹೆಚ್/ಡಿ.ಇಡಿ. ವಿದ್ಯಾರ್ಹತೆಯ ಆಧಾರದಲ್ಲಿ ನೇಮಕಗೊಂಡಿರುವ ಶಿಕ್ಷಕರು |

| | | |
|---|---|---|
| | | ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5ನೇ ತರಗತಿ) ವೃಂದದಲ್ಲಿ ವಿಲೀನಗೊಳಿಸಲಾಗಿರುತ್ತದೆ.<br><br>ಈ ವೃಂದಕ್ಕೆ ನಿಗದಿಪಡಿಸಿರುವ ವೃಂದ ಬಲಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಿಕ್ಷಕರಿಗೆ ಯಾವುದೇ ತೊಂದರೆಯಾಗದಂತೆ ಆಯಾ ಶಾಲೆಗಳಲ್ಲಿ ಮುಂದುವರೆಸಲಾಗಿದೆ.<br><br>4. ಆದರೆ ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕರು (ಜಿ.ಪಿ.ಟಿ) (6 ರಿಂದ 8ನೇ ತರಗತಿ) ಹುದ್ದೆಗಳ ನೇಮಕಾತಿ, ವರ್ಗಾವಣೆ ಮತ್ತು ಅತಿಥಿ ಶಿಕ್ಷಕರ ನೇಮಕಾತಿ ಸಂದರ್ಭಗಳಲ್ಲಿ ನಿಗದಿತ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನೇ/ ಶಿಕ್ಷಕರನ್ನೇ ಪರಿಗಣಿಸಲಾಗುತ್ತಿದೆ.<br><br>5. ಮುಂದುವರೆದು, 2017ರ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಶಾಲೆಯಲ್ಲಿನ ಕಾರ್ಯಭಾರದ ಅನುಸಾರ ಯಾವುದೇ ಶಿಕ್ಷಕರ ಸೇವೆಯನ್ನು ಪಾಠಬೋಧನೆಗೆ ಬಳಸಿಕೊಳ್ಳಲು ಅವಕಾಶವಿರುತ್ತದೆ. ಇದು ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೈಗೊಂಡಿರುವ ಕ್ರಮವಾಗಿರುತ್ತದೆ.<br><br>ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ ಯಾವುದೇ ಕಾಯ್ದೆ/ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲ. |
| ಇ) | ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕ (1 ರಿಂದ 5ನೇ ತರಗತಿ) ರ ಮತ್ತು | ಆರ್.ಟಿ.ಇ. ಕಾಯ್ದೆ ಮತ್ತು ನಿಯಮಗಳನುಸಾರ 2017ರಲ್ಲಿ ರಚಿಸಲಾಗಿರುವ ಹೊಸ ವೃಂದ ಮತ್ತು |

| | | |
|---|---|---|
| | ಪ್ರಾಥಮಿಕ ಶಾಲಾ ಸಾಮಾನ್ಯ ಶಿಕ್ಷಕ (1 ರಿಂದ 5ನೇ ತರಗತಿ) ರ ಮೂಲ ವಿದ್ಯಾರ್ಹತೆಯೇನು; | ನೇಮಕಾತಿ ನಿಯಮಗಳ ಅನುಸಾರ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಗಳಿಗೆ ಬೋಧಿಸುವ ಶಿಕ್ಷಕರನ್ನು ಒಳಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರು(ಪಿ.ಎಸ್.ಟಿ) (1 ರಿಂದ 5 ತರಗತಿ) ಎಂಬ ವೃಂದವನ್ನು ಸೃಜಿಸಲಾಗಿರುತ್ತದೆ.<br><br>ಸದರಿ ವೃಂದದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು(ಸಾಮಾನ್ಯ) ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರು(ಗಣಿತ ಮತ್ತು ವಿಜ್ಞಾನ) ಎಂಬ ಎರಡು ವರ್ಗಗಳಿದ್ದು, ಭಾಷಾ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು(ಸಾಮಾನ್ಯ) ವರ್ಗದಡಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಸದರಿ ಹುದ್ದೆಯ ನೇಮಕಾತಿಗೆ ಪಿ.ಯು.ಸಿ. ಮತ್ತು ಟಿ.ಸಿ.ಹೆಚ್/ಡಿ.ಇಡಿ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. |
| ಈ) | ಈ ರೀತಿ ಪದನಾಮೀಕರಿಸಲು ಯಾವ ನಿಯಮಗಳಲ್ಲಿ ಅವಕಾಶವಿದೆ ಹಾಗೂ ಸದರಿ ಶಿಕ್ಷಕರನ್ನು ಪದನಾಮೀಕರಿಸಲು ನಿಯಮಗಳನ್ನು ಜಾರಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?. | • ಆರ್.ಟಿ.ಇ ಕಾಯ್ದೆ ಮತ್ತು ಎನ್.ಸಿ.ಟಿ.ಇ ನಿಯಮಗಳ ಅನುಸಾರ 2017ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಅದರಂತೆ ಪ್ರಾಥಮಿಕ ಶಾಲೆಗಳಲ್ಲಿ 1ರಿಂದ 5ನೇ ತರಗತಿಗಳಿಗೆ ಬೋಧಿಸುವ ಶಿಕ್ಷಕರನ್ನು ಒಳಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರು(ಪಿ.ಎಸ್.ಟಿ) (1 ರಿಂದ 5 ತರಗತಿ) ಎಂಬ ವೃಂದವನ್ನು ಸೃಜಿಸಲಾಗಿರುತ್ತದೆ. ಈ ವೃಂದದಲ್ಲಿ ಈ ಕೆಳಗಿನಂತೆ ಎರಡು ವರ್ಗಗಳಿವೆ.<br><br>1. ಪ್ರಾಥಮಿಕ ಶಾಲಾ ಶಿಕ್ಷಕರು(ಸಾಮಾನ್ಯ).<br>2. ಪ್ರಾಥಮಿಕ ಶಾಲಾ ಶಿಕ್ಷಕರು(ಗಣಿತ ಮತ್ತು ವಿಜ್ಞಾನ).<br><br>• 1 ರಿಂದ 5ನೇ ತರಗತಿಗಳಿಗೆ ಹಿಂದಿ ಭಾಷೆ ಇರುವುದಿಲ್ಲವಾದ್ದರಿಂದ ಈ ಹಿಂದೆ ಪಿ.ಯು.ಸಿ. ಮತ್ತು ಟಿ.ಸಿ.ಹೆಚ್/ ಡಿ.ಇಡಿ ವಿದ್ಯಾರ್ಹತೆ ಆಧಾರದ ಮೇಲೆ ನೇಮಕಗೊಂಡಿರುವ ಹಿಂದಿ ಶಿಕ್ಷಕರನ್ನು |

| | | |
|---|---|---|
| | | ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5) ವೃಂದದಲ್ಲಿ ವಿಲೀನಗೊಳಿಸಲಾಗಿರುತ್ತದೆ.<br><br>ಮುಂದುವರೆದು, 2017ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶಾಲೆಯಲ್ಲಿನ ಕಾರ್ಯಭಾರದ ಅನುಸಾರ ಯಾವುದೇ ಶಿಕ್ಷಕರ ಸೇವೆಯನ್ನು ಪಾಠಬೋಧನೆಗೆ ಬಳಸಿಕೊಳ್ಳಲು ಅವಕಾಶವಿದ್ದು, ಇದು ಶಾಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೈಗೊಂಡಿರುವ ಕ್ರಮವಾಗಿರುತ್ತದೆ. |

**ಇಪಿ 100 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು